
ಎನ್ನುವ ದೇವತೆ ಎಂಬುದು ಗ್ರೀಕ್ ಪುರಾಣದ ಪ್ರತೀತಿ. ಮೆಸೋಮೇರಿಕಾದಿಂದ (ಮೆಕ್ಸಿಕೋ–ಅಮೆರಿಕನ್) ಹಿಡಿದು, ಜರ್ಮನಿಕ್, ಈಜಿಪ್ಟ್, ಚೀನಾ ಹೀಗೆ ಜಗತ್ತಿನ ಪ್ರತಿ ಮುಖ್ಯ ನಾಗರಿಕತೆಯೂ ಬರವಣಿಗೆಗೆ ದೈವಿಕ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ. ಭೌಗೋಳಿಕವಾಗಿ ಎಲ್ಲೆಲ್ಲೋ ಹರಡಿಕೊಂಡು ಆ ಕಾಲದಲ್ಲಿ ಸಂಪರ್ಕದ ಯಾವ ಪ್ರತ್ಯಕ್ಷ ಪರೋಕ್ಷ ಸಾಧ್ಯತೆಯೂ ಇಲ್ಲದಿರುವ ಪ್ರದೇಶಗಳಿವು. ಸಾಂಸ್ಕೃತಿಕವಾಗಿಯೂ ಸಾಮಾಜಿಕವಾಗಿಯೂ, ನಂಬಿಕೆ, ಆಚಾರಗಳಲ್ಲಿ ಒಂದಕ್ಕೊಂದು ಸಂಬಂಧವೇ ಇಲ್ಲದಿರುವವು, ಆದರೆ ಬರವಣಿಗೆಯ ವಿಷಯದಲ್ಲಿ ಮಾತ್ರ ಇವೆಲ್ಲರ ನಡುವೆ ಈ ಸಾಮ್ಯತೆ ಹೇಗೆ ಸಿದ್ಧಿಸಿತು? ಇದೂ ಕೇವಲ ಕಾಕತಾಳೀಯವೇ? ಅಥವಾ ಮನುಷ್ಯನ ಮೆದುಳು ಆಯಾ ಕಾಲ/ಪ್ರದೇಶದಲ್ಲಿ ತಾನು ಎದುರಿಸಿದ ಸನ್ನಿವೇಶಗಳಿಗೆ ಏಕರೂಪದಲ್ಲಿ ಪ್ರತಿಸ್ಪಂದಿಸಿದ ಪರಿಣಾಮವೇ ಇದು? ಆತ ಎದುರಿಸಿದ ಸವಾಲುಗಳು ಕೂಡಾ ಕಾರಣಾಂತರಗಳಿಂದ ತಾಳೆಯಾಗಿರಬಹುದೇ?

★★★

ಮೌನವೇ ಚಿರಸ್ಥಾಯಿ. ಅದೇ ಅಂತಿಮ ಸತ್ಯ. ಭಾಷೆ, ಮಾತು ಇತ್ಯಾದಿಗಳೆಲ್ಲ ಅದರ ದುರ್ಬಲ ಪ್ರಕಾರಗಳು ಎನ್ನುವ ಒಪ್ಪಿತ ಸತ್ಯಕ್ಕೆ ಪುನಃ ಬರೋಣ. ಮೌನವನ್ನು ಪರಿಪಾಲಿಸಿ, ಅದರ ಶಕ್ತಿಯನ್ನು ಜಗತ್ತಿಗೇ ಸಾರಿದವರಲ್ಲಿ ರಮಣ ಮಹರ್ಷಿಗಳು ಅಗ್ರಗಣ್ಯರು. ಅವರೂ ಬರವಣಿಗೆಯ ಮೇಲೆ ವಿಶ್ವಾಸವಿಟ್ಟಿದ್ದರು ಎಂಬುದಕ್ಕೆ ನಿದರ್ಶನಗಳಿವೆ. ಸೂರಿ ನಾಗಮ್ಮ ಎನ್ನುವ ರಮಣರ ಅನುಯಾಯಿ ಅವರ ಆಶ್ರಮದಲ್ಲಿ ವಾಸವಾಗಿದ್ದಾಗ ತನ್ನ ಅಣ್ಣನಿಗೆ ಬರೆದ ಪತ್ರಗಳ ಸಂಗ್ರಹ **'Letters from Sri Ramanashramam'** ಎನ್ನುವ ಪುಸ್ತಕ ರೂಪದಲ್ಲಿ ಲಭ್ಯವಿದೆ. ಆಕೆ ಎಲ್ಲವನ್ನೂ ದಾಖಲಿಸುತ್ತಿದ್ದಾಳೆ ಎನ್ನುವ ಅರಿವಿದ್ದ ರಮಣರು, ತಮ್ಮ ಪ್ರತಿ ಮುಖ್ಯ ಮಾತುಕತೆಯ ಸಂದರ್ಭದಲ್ಲೂ 'ನಾಗಮ್ಮ ಎಲ್ಲಿ?' ಎಂಬುದಾಗಿ ವಿಚಾರಿಸುತ್ತಿದ್ದರಂತೆ. ಒಂದು ವೇಳೆ ಆಕೆ ಸಮೀಪದಲ್ಲಿ ಇಲ್ಲದಿದ್ದರೆ, ಮರುದಿನ 'ನಿನ್ನೆ ಹೀಗಾಯಿತು' ಎಂಬುದಾಗಿ ನಾಗಮ್ಮನಿಗೆ ತಿಳಿಸುತ್ತಿದ್ದರಂತೆ ಅವರು. ಅದಿರಲಿ, ತಮ್ಮ ಮೌನ ಮುರಿದು ಮಾತು ಪುನರಾರಂಭಿಸುವ ನಡುವಿನ ಘಟ್ಟದಲ್ಲಿ ಅವರು ತಮ್ಮ ಸಂವಹನಕ್ಕೆ ಆಯ್ದುಕೊಂಡದ್ದು ಬರವಣಿಗೆಯ ಪ್ರಕಾರವನ್ನೇ. ತಾವು ಹೇಳಬೇಕಾದುದನ್ನು ಬರೆದು ಕೊಡುತ್ತಿದ್ದರು. ಹೀಗೆ, ಮೌನದ ಪ್ರತೀಕವಾಗಿದ್ದ ಅವರು ಬರವಣಿಗೆಯನೆಂದೂ ನಿರಾಕರಿಸಲಿಲ್ಲ. ತಮ್ಮ ಆಶ್ರಮದಿಂದ ಹೊರಡುತ್ತಿದ್ದ ಪ್ರಮುಖ ಪ್ರಕಟಣೆಗಳ ಕರಡನ್ನು ಅವರೇ ಖುದ್ದಾಗಿ ಪರಿಶೀಲಿಸುತ್ತಿದ್ದರು.




★★★

'ಎಲ್ಲವೂ ಸರಿ. ಪುಂಖಾನುಪುಂಖವಾಗಿ ಸುಳ್ಳುಗಳು ಸೃಷ್ಟಿಯಾಗುತ್ತಿವೆಯಲ್ಲ, ಇವತ್ತು? ಪೀತ ಪತ್ರಿಕೋದ್ಯಮದ ಅಡಿಯಲ್ಲಿ, ಇತಿಹಾಸ ದಾಖಲಾತಿಯ ನೆಪದಲ್ಲಿ, ಸೋಷಿಯಲ್ ಮೀಡಿಯಾಗಳ ವಿಶ್ವವಿದ್ಯಾಲಯದಲ್ಲಿ ಸಿಗುತ್ತಿರುವುದೆಲ್ಲ, ನೀನು ಹೇಳುತ್ತಿರುವ ಬರಹದ ಮಹತ್ವವನ್ನು ಉಳಿಸಿಕೊಂಡಿವೆಯೇ? ಅದಕ್ಕೇನು ಹೇಳುತ್ತೀ?' ಕೇಳಿದ ನನ್ನ ಮಿತ್ರ.

'ಅದೂ ಕೂಡ ಬರಹದ ಮೇಲೆ ಮನುಷ್ಯನಿಗಿರುವ ವಿಶ್ವಾಸದ ಕುರುಹೇ? ಬರೆದಾಗ ಜನ ಅದನ್ನು ನಂಬುತ್ತಾರೆ ಎನ್ನುವುದಕ್ಕೇ ಅಲ್ಲವೆ ಎಲ್ಲರೂ ಬರೆಯುವುದು? ಸುಳ್ಳಾಗಲೀ ಅಸಂಗತವಾಗಲೀ, ಇವತ್ತಲ್ಲದಿದ್ದರೂ ಮುಂದೆಂದೋ ಓದಿದವರು ಅದನ್ನು ನಿಜವೆಂದೇ ತಿಳಿಯಬಹುದಲ್ಲ? ಆ ಉದ್ದೇಶವಿರಬಹುದು ಇದರ ಹಿಂದೆ' ನಾನಂದೆ. 'ಅದಕ್ಕೇ... ನಾನು ಹೇಳೋದನ್ನು ಬೇಕಾದ್ರೆ ಬರೆದು ಕೊಡ್ತೇನೆ ಎಂದದ್ದು ನಿನಗೆ' ಎನ್ನುತ್ತ ಕಳ್ಳನಗೆ ಬೀರಿದ ಆತ. ●